ಸಾಕ್ಷಿಯನ್ನು ದಿಃ 09.10.2024 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು ಪಿಡಬ್ಲ್ಯೂ– 1

**ಪಾಟೀ ಸವಾಲು: ಎದುರುದಾರರ ಪರ ವಕೀಲರಿಂದ:–**

**1.** ನಾನು 7 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರುವುದಿಲ್ಲ. ನಾನು ಗಂಡನ ಮನೆಯಲ್ಲಿ ಕೇವಲ 2 ತಿಂಗಳು ಮಾತ್ರ ವಾಸವಾಗಿದ್ದೆನು ಎಂದರೆ ಸಾಕ್ಷಿಯು 3 – 4 ತಿಂಗಳು ವಾಸವಾಗಿದ್ದೆನು ಎಂದು ನುಡಿಯುತ್ತಾರೆ. ನಾನು ಬೇರೆ ಮನೆ ಮಾಡಿ ಎಂದು ಜಗಳ ತೆಗೆದು ನನ್ನ ತಂದೆಯ ಮನೆಗೆ ಹೋಗಿರುತ್ತೇನೆಂದರೆ ಸರಿಯಲ್ಲ. ನಾನು ಎದುರುದಾರನನ್ನು ತೊರೆದು ಹೋದ ನಂತರ ನನ್ನ ಮಾವ ಶಂಕರೇಗೌಡನ ಮಗನಾದ ಪುಟ್ಟ ಉಃ ನೀರೆಂದ್ರನ ಜೊತೆ ವಾಸವಾಗಿದ್ದೇನೆಂದರೆ ಸರಿಯಲ್ಲ. ನಾನು ಬೆಂಗಳೂರಿನಲ್ಲಿ ಒಬ್ಬ ಡಾಕ್ಟರ್ ಹತ್ತಿರ ಅಸಿಸ್ಟಂಟ್ ಆಗಿ ಕೆಲಸ ಮಾಡುತ್ತಿದ್ದೇನೆಂದರೆ ಸರಿಯಲ್ಲ. ನನ್ನ ತಂದೆಗೆ ಇಬ್ಬರು ಹೆಂಡತಿಯರು ಹಾಗೂ ಒಟ್ಟು 7 ಜನ ಮಕ್ಕಳಿರುತ್ತೇವೆ. ನನಗೆ ಇಬ್ಬರು ಅಕ್ಕಂದಿರು ಇರುತ್ತಾರೆ. ನಿಪಿ.1 ರಲ್ಲಿ ನನ್ನನ್ನು ಜೇಷ್ಠ ಪುತ್ರಿ ಎಂದು ಸುಳ್ಳು ಬರೆಸಿರುತ್ತಾರೆಂದರೆ ಸರಿಯಲ್ಲ. ನಿಪಿ.6 ರಿಂದ 10 ರ ಪಹಣಿಗಳು ಎದುರುದಾರನ ಹೆಸರಿಗೆ ಇಲ್ಲ ಎಂದರೆ ಸರಿ. ನಿಪಿ.13 ಹನುಮಂತಗೌಡನ ಹೆಸರಿಗೆ ಇರುತ್ತದೆ ಎಂದರೆ ಸರಿ. 2015 ರಲ್ಲಿ ಎದುರುದಾರರು ತನ್ನ ಕೆಲಸ ಬಿಟ್ಟಿರುತ್ತಾರೆಂದರೆ ಸರಿ. ಟೊಯೋಟ ಕಂಪನಿಯವರು ಎದುರುದಾರನನ್ನು ಕೆಲಸದಿಂದ ತೆಗೆದು ಹಾಕಿರುತ್ತಾರೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಎದುರುದಾರನೇ ಬಿಟ್ಟು ಬಂದಿರುತ್ತಾನೆಂದು ನುಡಿಯುತ್ತಾರೆ. ನಾನು ಎದುರುದಾರನಿಂದ ಜೀವನಾಂಶ ಪಡೆಯ ಬೇಕೆಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಎದುರುದಾರನಿಗೆ ಈಗ ಯಾವುದೇ ಉದ್ಯೋಗ ಇರುವುದಿಲ್ಲ ಎಂದರೆ ಗೊತ್ತಿಲ್ಲ.

**ಮರು ವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

ಪ್ರಧಾನ ಸಿ.ಜೆ. ಮತ್ತು ಜೆ.ಎಂಎಫ್.ಸಿ
ಮಳವಳ್ಳಿ